ಎಂಬ ತೀರ್ಮಾನಕ್ಕೆ ಬಂದಿದ್ದರು. ಸೂಕ್ಷ್ಮವಾದ ಆಸ್ತಿ ಭಾಗದ ವಿಷಯವನ್ನು, ತನ್ನ ಅತ್ತಿಗೆಯ ಮನಸ್ಸಿಗೆ ನೋವಾಗದಂತೆ ಬಗೆಹರಿಸಲು ಇಬ್ಬರೂ ನಿರ್ಧಾರ ಮಾಡಿಕೊಂಡು, ಒಂದು ವಾರ ಮುಂದಕ್ಕೆ ಹಾಕಿ ಅವರವರ ಮನೆಗಳಿಗೆ ತೆರಳಿದ್ದರು.

ತನ್ನ ಚಿಕ್ಕಪ್ಪಂದಿರು ತಂತಮ್ಮ ಮನೆಗಳಿಗೆ ತೆರಳಿದ ಮೇಲೆ ಚಂದ್ರಪ್ಪ ತನ್ನ ಶಾಲೆಗೆ ಹೊರಟಿದ್ದ ತನ್ನ ಮಗ ಮುಕುಂದನನ್ನು ಹತ್ತಿರಕ್ಕೆ ಕರೆದು ಮೆಲ್ಲಗೆ, 'ಜವರನ ಮನೆಗೆ ಹೋಗಿ ಯಾಕೋ ನಮ್ಮಪ್ಪ ಅರ್ಜಂಟಾಗಿ ನಿಮ್ಮನ್ನು ಕರೆಯುತ್ತಿದ್ದಾರೆ, ಬರಬೇಕಂತೆ ಅಂತ ಹೇಳಿ ಹೋಗು' ಎಂದು ಹೇಳಿದನು. ಜವರ ಚಂದ್ರಪ್ಪನಿಗೆ ಸ್ನೇಹಿತನಾಗಿದ್ದ.

ಮುಕುಂದ ಪೇಟೆಗೆ ಶಾಲೆಗೆ ಹೋಗುವಾಗ ಹಾಗೇ ಜವರನ ಮನೆ ಹತ್ತಿರ ಹೋಗಿ ಅವನಿಗೆ ತನ್ನ ಅಪ್ಪ ಹೇಳಿದಂತೆಯೇ ಹೇಳಿ ಹೋದ. ಆಗ ಜವರ, 'ಯಾಕೋ ಕಾಣ್ನಲ್ಲ, ಚಂದ್ರಪ್ಪ ನನಗೆ ಬರೋದಿಕ್ಕೆ ಹೇಳಿ ಕಳಿಸವ್ನಲ್ಲ' ಅಂದುಕೊಳ್ಳುತ್ತಾ ಚಂದ್ರಪ್ಪನ ಮನೆಯ ಬಳಿಗೆ ಬಂದ. ಜವರ ಬಂದುದನ್ನು ಕಂಡ ಚಂದ್ರಪ್ಪ ಜಗುಲಿ ಮೇಲೆ ತನ್ನ ಪಕ್ಕಕ್ಕೆ ಕೂರಿಸಿಕೊಂಡು, 'ಎಲ್ಲಿ? ನಾಲ್ಕೈದು ದಿನದಿಂದ ಇತ್ತ ಬರಲೇ ಇಲ್ಲ. ಎಲ್ಲಿಗೆ ಹೋಗಿದ್ದೆ? ಯಾವ ಆದಾಯದ ಕೆಲಸ ಹಿಡಿದಿದ್ದೀಯಪ್ಪ!' ಎಂದು ಅವನನ್ನು ಮಾತಿಗೆ ಎಳೆದ.

'ಏನೂ ಕೆಲಸ ಹಿಡಿದಿಲ್ಲ ಮಾರಾಯ. ಎರಡು ಮೂರು ದಿನದಿಂದ ಮೈಗೆ ಉಷಾರಿರಲಿಲ್ಲ. ಮನೆಯಲ್ಲೇ ಮಲಗಿ ಬಿಟ್ಟಿದ್ದೆ. ಈಗ ಸ್ವಲ್ಪ ಪರವಾಗಿಲ್ಲ. ನಿನ್ನ ಮಗ ಬಂದು ನನಗೆ ನಮ್ಮಪ್ಪ ಕರೆತಾ ಅವ್ರೆ ಅಂತ ಹೇಳಿದಾಗಲೂ ಸುಮ್ಮನೆ ಮಲಗೇ ಇದ್ದೆ' ಎಂದ ಜವರ. ಇವರಿಬ್ಬರೂ ಆತ್ಮೀಯ ಗೆಳೆಯರಾಗಿದ್ದು ದಲ್ಲಾಳಿ ವ್ಯಾಪಾರದ ಕೆಲಸಗಳನ್ನು ಮಾಡುತ್ತಿದ್ದರು.

ಜವರನ ಮಾತಿಗೆ ಚಂದ್ರಪ್ಪ, 'ನಿನ್ನ ಯಾಕೆ ಹೇಳಿ ಕಳಿಸಿ ಕರೆಸಿಕೊಂಡೆ ಅಂದ್ರೆ, ನಮ್ಮ ಮನೆಯಲ್ಲಿ ಮತ್ತೆ ಅದೇ ಹಳೇ ಸಮಸ್ಯೆ ಎದುರಾಗಿದೆ. ನನ್ನ ತಮ್ಮಂದಿರಿಬ್ಬರೂ ನನ್ನ ಜೊತೆ ಇನ್ನು ಮುಂದೆ ಒಂದಾಗಿ ಇರಲು ಸಾಧ್ಯವಿಲ್ಲ ಅಂತಿದ್ದಾರೆ. ನಮ್ಮ ನಮ್ಮ ಭಾಗ ನಮಗೆ ಕೊಟ್ಟು ಬಿಡಿ ಅಂತ ಹಟ ಹಿಡಿದು ಕೂತು ಬಿಟ್ಟವ್ರೆ' ಅಂದ.

'ಅವರು ಒಂದಾಗಿ ಇರಲ್ಲ ಅಂದ್ರೆ ಬೇರೆ ಹೋಗ್ಲಿ ಬಿಡು! ಅವರು ಭಾಗ ತಕ್ಕೊಂಡು ಹೋಗ್ಲಿ. ನೀನ್ಯಾಕೆ ಬ್ಯಾಡ ಅಂತೀಯಾ? ನಿಂದೇನೂ ಕೆಟ್ಟೋಗಲ್ಲ ಬಿಡು! ನಿನ್ನ ಲೇವಾದೇವಿನ ಅವರಿಗೆ ತೋರಿಸ್ಬೇಡ!' ಅಂದ ಜವರ. 'ನಾನೇನು ಅವರಿಗೆ ಅಡ್ಡಿ ಮಾಡ್ತ ಇಲ್ಲ. ನಿನಗೆ ವಿಷಯ ಹೀಗೀಗೆ ಅಂತ ಹೇಳ್ದೆ ಅಷ್ಟೆ. ನನ್ನ ಚಿಕ್ಕಪ್ಪಂದಿರಿಬ್ಬರೂ ಬೆಳಿಗ್ಗೆ ಮನೆಗೆ ಬಂದು ಮಾತುಕತೆ ಆಡಿ, ಮತ್ತೆ ಮುಂದಿನ ಭಾನುವಾರ ಸೇರೋಣ, ಅವತ್ತು ಎಲ್ಲಾ ಭಾಗ ಮಾಡುವ ಅಂತ ಹೇಳಿ ಹೋಗವ್ರೆ' ಎಂದ ಚಂದ್ರಪ್ಪ. 'ಅವರು ಭಾಗ ಆಗಿಬಿಡಲಿ ಬಿಡು ಚಂದ್ರಪ್ಪ' ಎಂದ ಜವರ.

'ಈ ವಿಷಯವನ್ನು ನಿನ್ನ ಕಿವಿ ಮೇಲೆ ಹಾಕುವ ಅಂತ ಕರೆಸ್ದೆ ಅಷ್ಟೆ. ಆದ್ರೆ ನೀನು ಯಾರಿಗೂ ಈ ವಿಷಯ ಹೇಳಬ್ಯಾಡ! ಯಾಕೆಂದ್ರೆ ಅವ್ರು ಯಾರಿಗೂ ಈ ವಿಷಯ ಹೇಳಬ್ಯಾಡಿ ಅಂತ ತಾಕೀತು ಮಾಡಿದ್ದಾರೆ' ಎಂದ ಚಂದ್ರಪ್ಪ.

'ನಾನ್ಯಾಕೆ ಯಾರಿಗೆ ಹೇಳ್ಲಿ?' ಎಂದವನೇ, 'ಬರ್ತೀನಿ' ಅಂತ ಜಗುಲಿ ಇಳಿದು ಕೆಮ್ಮುತ್ತಾ ಮನೆಗೆ ಹೊರಡಲು ಸಿದ್ಧನಾದ ಜವರ, ಮತ್ತೆ ಒಂದೆಜ್ಜೆ ಹಿಂದಕ್ಕೆ ಬಂದು, 'ನೀನು ಕೈಯಾಗ್ಲೋನು! ಊರುಮಗ್ಗುಲ ಹೊಲವನ್ನೇ ನಿನ್ನ ಪಾಲಿಗೆ ಬೇಕು ಅಂತ ಹಟ ಹಿಡಿದು ಕೇಳು. ದೂರದಲ್ಲಿ ನಿನಗೆ ಪಾಲು ಕೊಟ್ಟರೆ ನೀನು ಅಷ್ಟು ದೂರ ಹೋಗಿ ವ್ಯವಸಾಯ ಮಾಡಿಸಕ್ಕೆ ಆಗಲ್ಲ. ನಿನಗೆ ತುಂಬಾ ಕಷ್ಟವಾಗುತ್ತದೆ' ಎಂದು ಚಂದ್ರಪ್ಪನಿಗೆ ಸಲಹೆ ನೀಡಿದ. 'ಅದಕ್ಕೇ ನಾನು ನಿನ್ನನ್ನು ಕರೆಸಿದ್ದು! ಏನಾದ್ರು ಸಲಹೆ ಕೊಡ್ತಿ ಅಂತ' ಎಂದ ಚಂದ್ರಪ್ಪ. 'ಅವತ್ತು ನನಗೆ ಅದೇ ಹೊಲ ಬೇಕು ಅಂತ ಪಟ್ಟಾಗಿ ಹಟ ಮಾಡಿ ಕೂತು ಬಿಡು' ಎಂದು ಹೇಳಿದ ಜವರ.

ಸಿದ್ದೇಗೌಡರ ಊರುಮಗ್ಗುಲ ಹೊಲ ತುಂಬಾ ಫಲವತ್ತಾಗಿತ್ತು. ಅದಕ್ಕೆ ಬೆಲೆಯೂ ಇತ್ತು. ಆದರೆ ಅದೇ ಊರುಮಗ್ಗುಲು ಹೊಲದ ಮೇಲೆಯೇ ಮೂರೂಜನ ಅಣ್ಣತಮ್ಮಂದಿರಿಗೂ ಕಣ್ಣಿತ್ತು. 'ನ್ಯಾಯಕ್ಕೆ ಕೂತಾಗ ಏನಾಗುತ್ತೋ ನೋಡಬೇಕು! ನಾನು ಆ ಹೊಲ ನನಗೇ ಕೊಡಿ ಅಂತ ಕೇಳುವುದನ್ನು ಮಾತ್ರ ಪಟ್ಟಾಗಿ ಕೇಳ್ತೀನಿ. ಮತ್ತೆ ಈ ವಿಷಯ ನಮ್ಮಿಬ್ಬರಲ್ಲೇ ಇರಲಿ! ಸದ್ಯಕ್ಕೆ ಯಾರಿಗೂ ಗೊತ್ತಾಗುವುದು ಬೇಡ' ಎಂದು ಚಂದ್ರಪ್ಪ ಜವರನಿಗೆ ಮತ್ತೊಮ್ಮೆ ನೆನಪಿಸಿದನು.

3